ಓ.ಎಸ್. – 57/2017

ಡಿ. ಡಬ್ಲೂ – 1

ಸಾಕ್ಷಿಯನ್ನು ದಿಃ 31.07.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ವೈ.ಎಂ.ಎನ್ ರವರಿಂದ**

**1.** ನಾನು 2024 ಮಾರ್ಚ್ ತಿಂಗಳಿನಿಂದ ಪ್ರತಿವಾದಿ ಕಚೇರಿಯಲ್ಲಿ ಎಇಇ ಆಗಿ ಸೇವೆ ಸಲ್ಲಿಸುತ್ತಿದ್ದೇನೆ. ನಾನು ಪ್ರತಿವಾದಿ 1 ರಿಂದ 3 ರವರ ಪರವಾಗಿ ಈ ದಾವೆಯಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ. 3 ಪ್ರತಿವಾದಿಗಳಿಂದ ನಾನು ಅಧಿಕಾರ ಪತ್ರವನ್ನು ಪಡೆದುಕೊಂಡು ಈ ದಾವೆಯನ್ನು ಸಾಕ್ಷಿ ನುಡಿಯುವ ಪೂರ್ವದಲ್ಲಿ ಹಾಜರು ಪಡಿಸಿರುವುದಿಲ್ಲ. ಈ ದಾವೆಯಲ್ಲಿ 2 ನೇ ಪ್ರತಿವಾದಿ ಮಾತ್ರ ವಕಾಲತ್ ಅನ್ನು ಹಾಕಿದ್ದಾರೆ ಎಂದರೆ ಸರಿ. ನಿಡಿ–1 ರಂತೆ 2 ನೇ ಪ್ರತಿವಾದಿ ಪರವಾಗಿ ಮಾತ್ರ ಸಾಕ್ಷಿ ನುಡಿಯಲು ನನಗೆ ಅಧಿಕಾರ ನೀಡಲಾಗಿದೆ ಎಂದರೆ ಸರಿ. ರೈಲ್ವೇ ಇಲಾಖೆಯ ಜಾಗವನ್ನು 2 ನೇ ಪ್ರತಿವಾದಿ ಇಲಾಖೆಯವರು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ರೈಲ್ವೇ ಇಲಾಖೆಯಿಂದ ನಮಗೆ ಪತ್ರ ಬಂದಿದೆ ಎಂದರೆ ಸರಿಯಲ್ಲ. ಮಧುರಾ ಹೊಟೇಲಿನ ಉಮೇಶ್ ರವರು, ಎಸ್ ಹೆಚ್ ಬಂಗಾರಪ್ಪರವರು ಸಹ ಒತ್ತುವರಿ ಮಾಡಿರುವುದಾಗಿ ಆಪಾಧಿಸಿ ನಮಗೆ ಅರ್ಜಿಯನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಷಣ್ಮುಖ ವಕೀಲರು

ನಮ್ಮ ಅರ್ಜಿಯನ್ನು ನೀಡಿದ್ದಾರೆ ಎಂದರೆ, ಇರಬಹುದು. ಸಾಗರದ ನಗರಸಭೆಯ ಆಯುಕ್ತರು, ನಾರಾಯಣಪ್ಪ ಕೆಇಬಿ, ಮುಖ್ಯ ಅಭಿಯಂತರರು, ರೈಲ್ವೇ ಇಲಾಖೆ, ಸ್ಟೇಷನ್ ಮಾಸ್ಟರ್, ಸಾಗರ, ಸುರೇಶ್ ಬಾಬು ವಕೀಲರು, ಅಣ್ಣಪ್ಪ, ದೇವೇಂದ್ರ, ರಮೇಶ್ ಸಹ ತಮ್ಮ ಜಾಗವನ್ನು ನಾವು ಒತ್ತುವರಿ ಮಾಡಿದ್ದೇವೆ ಎಂದು ಆಪಾಧಿಸಿ ಅರ್ಜಿಯನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಸುಧಾಕರ ಕುಗ್ವೆ , ರೇಣುಕಮ್ಮರವರು ತಮ್ಮ ಜಾಗವನ್ನು ಒತ್ತುವರಿ ಮಾಡಿರುವುದಾಗಿ ಆಪಾಧಿಸಿ ಅರ್ಜಿಯನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಮೇಲಿನಂತೆ ಒಟ್ಟು 14 ಜನರಿಗೆ ದಿನಾಂಕ 06.06.2026 ರಂದು ಸ್ಥಳಕ್ಕೆ ಬನ್ನೀ ಎಲ್ಲಾ ಸ್ವತ್ತುಗಳನ್ನು ಅಳತೆ ಮಾಡೋಣಾ ಎಂದು ನಾವು ನೋಟೀಸ್ ಅನ್ನು ನೀಡಿದ್ದೇವೆ ಎಂದರೆ ಸರಿ. ವಾದಿಗೂ ಸಹ ನೋಟೀಸ್ ಅನ್ನು ನೀಡಿದ್ದೇವೆ ಎಂದರೆ ಸರಿ. ದಿನಾಂಕ 06.06.2026 ರಂದು ಎಡಿಎಲ್ ಆರ್ ಕಚೇರಿಯ ಅಧಿಕಾರಿಗಳು ಅಥವಾ ನಮ್ಮ ಇಲಾಖೆಯವರು ಅಳತೆ ಕಾರ್ಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಮೇಲಿನ 14 ಜನರ ಪೈಕಿ ಸುಧಾಕರ ಮತ್ತು ಮಧುರಾ ಹೋಟೇಲಿನವರು ಹಾಗೂ ಸರ್ವೇ ನಂಬರ್ 14 ರ ಜಮೀನನವರು, ಆರ್ ಎಸ್ ಎಸ್ ಭವನದವರು ಹೀಗೆ ಕೆಲವರು ಮಾತ್ರ ಆ ದಿನ ಸ್ಥಳಕ್ಕೆ ಬಂದಿದ್ದರು. ಆ ದಿನ ಸರ್ವೇ ಅಧಿಕಾರಿಗಳು ಬಾರದ ಕಾರಣ ಅಳತೆ ಕಾರ್ಯವನ್ನು ರದ್ದುಗೊಳಿಸಲಾಯಿತು. ಅಳತೆ ಮಾಡಿಸಲು ಸರ್ವೇ ಅಧಿಕಾರಿಗಳು ದಿನಾಂಕವನ್ನು ನಮಗೆ ಕೊಟ್ಟಿಲ್ಲ. ದಿನಾಂಕ 06.06.2026 ರಂದು ಸರ್ವೇ ಅಧಿಕಾರಿಗಳು ಬಂದಿಲ್ಲ ಎಂದು ಅಲ್ಲಿ ಹಾಜರಿದ್ದವರಿಗೆ ತಿಳಿಸಿದ್ದೇವೆ. ಈ ಕುರಿತು ನಮ್ಮಲ್ಲಿ ಲಿಖಿತ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. " 4161" ರ ನೋಟಿಫಿಕೇಶನ್ ನ ಬಗ್ಗೆ ನನಗೆ ಗೊತ್ತು ಹಾಗೂ ನಾನು ಸದರಿ ನೋಟಿಫಿಕೇಶನ್ ಅನ್ನು ನೋಡಿದ್ದೇನೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.